# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 07 ಬ್ಯಾಟರಾಯನಪುರ ವಾರ್ಡ್ ಸಮಿತಿ ಸಭೆಯ ನಡವಳಿ.

ದಿನಾಂಕ **02.01.2021** ರಂದು ವಾರ್ಡ್ ಕಛೇರಿಯಲ್ಲಿ ಬೆಳ್ಳಿಗೆ **10.30** ಕ್ಕೆ ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ವಾರ್ಡ್ ನಂ.07, ಬ್ಯಾಟರಾಯನಪುರ ವಾರ್ಡ್‌ಗೆ ಮಾನ್ಯ ಆಯುಕ್ತರ ಆದೇಶದಂತೆ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿರುವ ಶ್ರೀ.ಪ್ರಕಾಶ್.ಜಿ ರವರು ಸಭೆಯಲ್ಲಿ ಹಾಜರಿದ್ದು, ಈ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಗಮನ ಹರಿಸಿ, ಕೈಗೊಂಡ ಕ್ರಮದ ಬಗ್ಗೆ ಚರ್ಚಿಸಲಾಯಿತು.

1. **ಘನತ್ಯಾಜ್ಯ ನಿರ್ವಹಣೆ:**
   1. ಘನತ್ಯಾಜ್ಯಾ ವಿಂಗಡಣೆ ಶೇಕಾಡವಾರು, 37% ರಷ್ಟಿದ್ದು, ವಿಂಗಡಣೆಯ ಶೇಕಾಡಾವಾರನ್ನು ಹೆಚ್ಚಿಸಬೇಕೆಂದು ತಿಳಿಸಲಾಯಿತು.
   2. ಘನತ್ಯಾಜ್ಯ ನಿರ್ವಹಣೆಗಾಗಿ ನಿಗದಿಪಡಿಸಿರುವ ಟ್ರಾಕ್ಟರ್ ಯಂತ್ರವನ್ನು ದುರಸ್ತಿಗೊಳಿಸುವುದು ಮತ್ತು ವಾರ್ಡ್ 07ರ ಕಛೇರಿ ಆವರಣದಲ್ಲಿ ನಿಲ್ಲಿಸಿರುವ ಕಾಂಪ್ಯಾಕ್ಟರ್‌ನ್ನು ದುರಸ್ಥಿ ಮಾಡಿಸಿ, ಘಣತ್ಯಾಜ್ಯಾ ನಿರ್ವಹಣೆಗೆ ಉಪಯೋಗಿಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ನೆರೆದಿದ್ದ ಎಲ್ಲಾರು ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ.
   3. ವಾರ್ಡ್‌ನಲ್ಲಿ ಹೆಚ್ಚಾಗಿ ಬ್ಲಾಕ್ ಸ್ಪಾಟ್‌ಗಳ ಕಸವನ್ನು ತೆರವು ಮಾಡದೇ ಇರುವುದು ಕಂಡುಬಂದಿದ್ದು, ಇದರ ಬಗ್ಗೆ ಸೂಕ್ತ ಕ್ರಮವಹಿಸ ಬೇಕಾಗಿರವುದರಿಂದ ಮುಂದಿನ ಸಭೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರು ಖುದ್ದಾಗಿ ಹಾಜರಾಗಬೇಕೆಂದು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಒಮ್ಮತವಾಗಿ ಮನವಿ ಮಾಡಿರುತ್ತಾರೆ.
   4. ವಾರ್ಡ್ ನಲ್ಲಿ ಘಣತ್ಯಾಜ್ಯಾ ನಿರ್ವಹಣೆ ಕಾಮಗಾರಿಗೆ ಸಂಭಂದಿಸಿದಂತೆ, ಹೆಚ್ಚುವರಿ ಆಟೋ ಟಿಪ್ಪರ್ ಗಳನ್ನು ನಿಯೋಜಿಕೊಳ್ಳುವ ಪ್ರಸ್ಥಾವನೆಗೆ ಅನುಮೋದನೆ ಪಡೆಯಲು ಕ್ರಮ ವಹಿಸಬೇಕೆಂದು ಸಭೆಯಲ್ಲಿ ಹಾಜರಿದ್ದ, ಸಾರ್ವಜನಿಕರು ಅಭಿಪ್ರಾಯ ಪಟ್ಟಿರುತ್ತಾರೆ.
2. **ಆರೋಗ್ಯ ಇಲಾಖೆ:**
   1. ಕಾಫೀ ಬೋರ್ಡ್ ಬಡಾವಣೆಯ ಮುಖ್ಯರಸ್ತೆಯಲ್ಲಿರುವ ಬೀದಿ ಬದಿ ವ್ಯಾಪಾರಿಗಳನ್ನು ಸ್ಥಳದಿಂದ ತೆರವುಮಾಡುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವುದು.
   2. ವಸತಿ ಸಮುಚ್ಚಯಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪರಿಶೀಲಿಸಲು ನಿಯಮಿತ ತಪಾಸಣೆಯನ್ನು ಕೈಗೊಳ್ಳುವುದು.
   3. ಅಂಗಡಿಗಳ ಮಾಲಿಕರು ವ್ಯಾಪಾರ ಪರವಾನಿಗೆಯನ್ನು ಪಡೆಯದೇ ವ್ಯಾಪಾರ ಮಾಡುತ್ತಿರುವುವರ ವಿರುದ್ದ ಕ್ರಮಕೈಗೊಳ್ಳುವುದು.

4. ಸಾಂಕ್ರಮಿಕ ರೋಗ ಹರಡುವಿಕೆಯನ್ನು ತಡೆಗಟ್ಟಲು ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್-19 ತಪಾಸಣೆ ಶಿಬಿರಗಳನ್ನು ಹಮ್ಮಿಕೊಳ್ಳುವುದು.
5. ಆರೋಗ್ಯ ಇಲಾಖೆಯಿಂದ, ದಿನ ನಿತ್ಯ 15-20 ಕೇಸ್‌ಗಳನ್ನು ದಾಖಲಿಸಬೇಕೆಂದು ಮಾನ್ಯ ಆಯುಕ್ತರು, ಸೂಚಿಸಿರುತ್ತಾರೆ. ಅದರಂತೆ ಸಾರ್ವಜನಿಕರು ಮಾಸ್ಕ್ ಧರಿಸುವಂತೆ ಸೂಚಿಸುವುದು ಹಾಗೂ ಹಾಕದೆ ಇದ್ದಲ್ಲಿ ಧಂಡ ವಿಧಿಸಲು ಕ್ರಮವಹಿಸಬೇಕು ಎಂದು ತಿಳಿಸಲಾಯಿತು.

3. **ಕಾಮಗಾರಿ ವಿಭಾಗ:**

1. ಮಳೆಗಾಲ ಸಮಯದಲ್ಲಿ ರಸ್ತೆಯ ಮೇಲೆ ನೀರು ನಿಲ್ಲದಂತೆ ಮಳೆ ನೀರು ಹೋಗುವುದಕ್ಕೆ ಮಾಡಿರುವ ಜಾಗವನ್ನು ಶುಚಿಯಾಗಿಡುವುದು.
2. ರಸ್ತೆಗಳ ಪಾದಚಾರಿ ಮಾರ್ಗವನ್ನು ಶುಚಿಯಾಗಿಡುವುದು, ಮತ್ತು ಪಾದಚಾರಿ ಮಾರ್ಗದ ಮೇಲೆ ಸ್ಲಬ್ಸ್ ಅಥವಾ ಚಪ್ಪಡಿ ಇಲ್ಲದೇ ಇರುವುದು ಕಂಡು ಬಂದಲ್ಲಿ ಕೂಡಲೇ ಸರಿಪಡಿಸುವುದು.
3. ಸಾರ್ವಜನಿಕರಿಂದ ಯಾವುದೇ ದೂರುಗಳು ಬಂದಲ್ಲಿ ಕೂಡಲೇ ಸಹಕರಿಸಲು ಕ್ರಮಕೈಗೊಳ್ಳಲುವುದು.

4. **ವಿದ್ಯುತ್ (ಬೀದಿ ದೀಪಗಳ ನಿರ್ವಹಣೆ) ವಿಭಾಗ:**

1. ಬೀದಿ ದೀಪಗಳ ನಿರ್ವಹಣೆ ಅತ್ಯಂತ ಪ್ರಮುಖವಾದ ಕೆಲಸವಾಗಿದ್ದು, ಬೀದಿ ದೀಪಗಳನ್ನು ಅದಷ್ಟು ಸುಸ್ಥಿತಿಯಲ್ಲಿಡುವುದು.
2. ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಲಾಗಿರುವ ಎಲ್.ಇ.ಡಿ ವಿದ್ಯುತ್ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಕ್ರಮವಹಿಸುವುದು.
3. ಕಾಫಿಬೋರ್ಡ್ ಬಡಾವಣೆ ಪಾರ್ಕ್ ನಿಂದ ಮರಿಯಣ್ಣಪಾಳ್ಯ ಕಡೆ ಹೋಗುವ ರಸ್ತೆಯ ಬಲ ಬದಿಯಲ್ಲಿ ಬೀದಿ ದೀಪಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲ ವೆಂದು ಮರಿಯಣ್ಣಪಾಳ್ಯ ನಿವಾಸಿಗಳು ತಿಳಿಸಿರುತ್ತಾರೆ.

5. **ಕಂದಾಯ ವಿಭಾಗ:**

1. ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಪಾವತಿಯನ್ನು ಬಾಕಿ ಉಳಿಸಿಕೊಂಡಿರುವ ಪ್ರಮುಖ ಸಂಸ್ಥೆಗಳನ್ನು ಗುರುತಿಸಿ ಇವುರುಗಳಿಂದ ಕಂದಾಯವನ್ನು ವಸೂಲಿ ಮಾಡಲು ಸೂಕ್ತ ಕ್ರಮಕೈಗೊಳ್ಳಲುವುದು.
2. ಮುಂದಿನ ಸಭೆಗೆ, ವಾರ್ಡ್ ವ್ಯಾಪ್ತಿಯಲ್ಲಿ, DWCC AND Bio methanisationplant ಘಟಕವನ್ನು ನಿರ್ಮಿಸಲು, ವಾರ್ಡ್‌ನಲ್ಲಿ ಲಭ್ಯವಿರುವ ಸರ್ಕಾರಿ ಜಾಗವನ್ನು ಗುರುತಿಸಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ, ಕಂದಾಯ ಇಲಾಖೆಯ ಅಧಿಕಾರಿಗಳಿಗೆ ನೋಡೆಲ್ ಅಧಿಕಾರಿಯವರು ಸೂಚಿಸಿದರು.

6. **ಜಲಮಂಡಳಿ ವಿಭಾಗ:**

1. ರಸ್ತೆ ಡಾಂಬರೀಕರಣ ಮುಗಿದ ನಂತರ ಸ್ಯಾನಿಟರಿ ಚೇಂಬರ್‌ಗಳ ಮಟ್ಟವನ್ನು ರಸ್ತೆ ಮಟ್ಟಕ್ಕೆ ಸರಿಪಡಿಸುವುದು.
2. ಮರಿಯಣ್ಣಪಾಳ್ಯದ ಹೀರಾ ಕೆಟರ್ಸ್ ರಸ್ತೆಯಲ್ಲಿ ನಿರ್ವಹಿಸಿರುವ ಒಳಚರಂಡಿ ಕಾಮಗಾರಿಯ ಇಳಿಜಾರು ಸರಿಯಿಲ್ಲದೆ ಇದ್ದು, ಇದನ್ನು ಕೂಡಲೇ ಪರಿಶಿಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿರುತ್ತಾರೆ.
3. ತಮ್ಮ ಇಲಾಖೆ ವತಿಯಿಂದ ರಸ್ತೆ ಅಗೆದರೆ ಅದನ್ನು ನಿಯಾಮಾನುಸಾರ ಸರಿಪಡಿಸುವುದು.

7. **ತೋಟಗಾರಿಕೆ:**

1. ಉದ್ಯಾನವನ ಗಳ ನಿರ್ವಹಣೆಯ ಗುತ್ತಿಗೆದಾರರಿಗೆ ನಿರ್ವಹಣಾ ಬಿಲ್ ನ್ನು ಸುಮಾರು 2 ವರ್ಷಗಳಿಂದ ಪಾವತಿ ಹಾಗದೆ ಇದ್ದು, ಇದರಿಂದ ಉದ್ಯಾನವನಗಳ ನಿರ್ವಹಣೆ ಕಷ್ಟವಾಗುತ್ತಿರವುದರ ಬಗ್ಗೆ ತೋಟಗಾರಿಕೆ ಅಧೀಕ್ಷಕರು ತಿಳಿಸಿದರು.

8. **ಅರಣ್ಯ ಇಲಾಖೆ:-**

1. ಅರಣ್ಯ ವಿಭಾಗದವರು ವಾರ್ಡ್ ಸಮಿತಿ ಸಭೆಗೆ ಹಾಜರಾಗಿರುವುದಲ್ಲ, ನೋಡೆಲ್ ಅಧಿಕಾರಿಯವರು ದೂರವಾಣಿ ಮೂಲಕ ಸಂಪರ್ಕಿಸಿ, ಪಂಪಾ ಬಡಾವಣೆ ಮತ್ತು ಅಮೃತನಗರ ಮಾರುತಿ ಪಾರ್ಮ್ ಹತ್ತಿರ ಪೂರ್ಣವಾಗಿ ಒಣಗಿಹೋಗಿರುವ ಮರಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತೆರವುಮಾಡಬೇಕೆಂದು ಸೂಚಿಸಲಾಗಿರುತ್ತದೆ. ಸದರಿ ವಿಷಯ ಬಗ್ಗೆ ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಸೂಚಿಸಲಾಗಿದೆ.

ನೋಡೆಲ್ ಅಧಿಕಾರಿ

ವಾರ್ಡ್ 07